## ಕರ್ನಾಟಕ ಸರ್ಕಾರ

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ,ಮಲ್ಲೇಶ್ವರಂ,ಬೆಂಗಳೂರು-12**

ಸಂಖ್ಯೆ:ಪ.ಪೂ.ಶಿ.ಇ/ಶೈ.ಶಾ.04/ಹೆ.ಮ.ಶು.ವಿ/ SCP/2014-15 ದಿನಾಂಕ:17-02-2015

**ಜ್ಞಾಪನ**

ವಿಷಯ: 2014-15ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳಲ್ಲಿವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ವಿದ್ಯಾರ್ಥಿನಿಯರ ಸರ್ಕಾರೇತರ ಶುಲ್ಕಗಳನ್ನು ಲೆಕ್ಕಶೀರ್ಷಿಕೆ **"2202-02-107-3-02-422" ಎಸ್‌ಸಿಪಿ ಯೋಜನೆಯಡಿಯಲ್ಲಿ** ಎರಡನೇ ಮತ್ತು ಮೂರನೇ ಕಂತಿನಲ್ಲಿ ಬಿಡುಗಡೆ ಮಾಡಿರುವ ಅನುದಾನದಲ್ಲಿ ಶುಲ್ಕ ಮರುಪಾವತಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ ಇಡಿ 81 ಟಿಪಿಯು 2014 ದಿನಾಂಕ 24.02.2014.
2. ಸರ್ಕಾರದ ಆದೇಶ ಸಂಖ್ಯೆ ಇಡಿ 103 ಯೋಯೋಕ 2014 ದಿನಾಂಕ 22.01.2015.
3. ಸರ್ಕಾರದ ಆದೇಶ ಸಂಖ್ಯೆ ಇಡಿ 103 ಯೋಯೋಕ 2014 ದಿನಾಂಕ 06.08.2014.
4. ರಾಜ್ಯದ ಜಿಲ್ಲಾ ಉಪನಿರ್ದೇಶಕರುಗಳಿಂದ ವಿವಿಧ ದಿನಾಂಕಗಳಲ್ಲಿ ಬಂದಿರುವ ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿನಿಯರ ಅಂಕಿಅಂಶಗಳು.

*****

ಉಲ್ಲೇಖ(2)ಮತ್ತು(3)ರ ಸರ್ಕಾರದ ಆದೇಶದ ಅನುಬಂಧ-2ರ ಕ್ರಮ ಸಂಖ್ಯೆ 8ರಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ವಿದ್ಯಾರ್ಥಿನಿಯರ ಸರ್ಕಾರೇತರ ಶುಲ್ಕ ಮರು ಪಾವತಿಗಾಗಿ ಲೆಕ್ಕ ಶೀರ್ಷಿಕೆ "2202-02-107-3-02-422(ಯೋಜನೆ)" ಅಡಿಯಲ್ಲಿ ಎರಡನೇ ಮತ್ತು ಮೂರನೇ ಕಂತಿನಲ್ಲಿ ಒಟ್ಟು ರೂ.122.75ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ. ಸದರಿ ಅನುದಾನ ಬಿಡುಗಡೆ ಮಾಡಲು 2014-15ನೇ ಸಾಲಿನಲ್ಲಿ ರಾಜ್ಯದ ಪ್ರತಿ ಜಿಲ್ಲೆಯ ಉಪನಿರ್ದೇಶಕರು ತಮ್ಮ ಜಿಲ್ಲಾ ವ್ಯಾಪ್ತಿಗೆ ಬರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರ ಪೂರ್ಣ ಅಂಕಿಅಂಶಗಳ ಮಾಹಿತಿಗಳನ್ನು ಉಲ್ಲೇಖ(4)ರಲ್ಲಿ ಪಡೆಯಲಾಯಿತು. ಅದರಂತೆ ಸರ್ಕಾರೇತರ ಶುಲ್ಕ ಮರುಪಾವತಿಗಾಗಿ ಉಲ್ಲೇಖ (1)ರ ಸರ್ಕಾರಿ ಆದೇಶದಲ್ಲಿ ನಿಗದಿಪಡಿಸಿರುವ ಸರ್ಕಾರೇತರ ಶುಲ್ಕಗಳು ಈ ಕೆಳಕಂಡಂತಿರುವ ಶುಲ್ಕಗಳನ್ನು ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಅನುದಾನ ಬಿಡುಗಡೆ ಮಾಡಬೇಕಾಗಿರುತ್ತದೆ.

| ಕ್ರಮ ಸಂಖ್ಯೆ | ಶುಲ್ಕಗಳ ವಿವರ | ಪ್ರಥಮ ಪಿಯುಸಿ | ದ್ವಿತೀಯ ಪಿಯುಸಿ |
|---|---|---|---|
| 1 | ಕ್ರೀಡಾ. ಶುಲ್ಕ | 84-00 | 84-00 |
| 2 | ವಾಚನಾಲಯ ಶುಲ್ಕ | 120-00 | 120-00 |
| 3 | ಶಿಕ್ಷಕರ ಕಲ್ಯಾಣ ನಿಧಿ | 25-00 | 25-00 |
| 4 | ವಿದ್ಯಾರ್ಥಿ ಕಲ್ಯಾಣ ನಿಧಿ | 25-00 | 25-00 |
| 5 | ಪರೀಕ್ಷಾ ಶುಲ್ಕ (ಕಾಲೇಜಿನ) | 168-00 | 168-00 |
| 6 | ವಿಶೇಷ ಕ್ರೀಡಾ ಶುಲ್ಕ | 34-00 | 34-00 |
| | | 456-00 | 456-00 |

ಮೇಲೆ ವಿವರಿಸಿರುವ ಈ ಶುಲ್ಕಗಳಂತೆ, ಪ್ರತಿ ವಿದ್ಯಾರ್ಥಿನಿಗೆ ರೂ456/-ರಂತೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರಥಮ ಮತ್ತು ದ್ವಿತೀಯ ಪಿಯುಸಿ ಪರಿಶಿಷ್ಟ ಜಾತಿ ವಿದ್ಯಾರ್ಥಿನಿಯರಿಗೆ ನೀಡಿರುವ ಸರ್ಕಾರೇತರ ಶುಲ್ಕ ವಿನಾಯಿತಿಯನ್ನು ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಮರುಪಾವತಿ ಸಂಬಂಧ ಅನುದಾನ ಬಿಡುಗಡೆ ಮಾಡಲಾಗುತ್ತದೆ.

ಉಲ್ಲೇಖ 02 ಮತ್ತು 03ರಲ್ಲಿ ಸರ್ಕಾರವು ಪ್ರಸಕ್ತ ಶೈಕ್ಷಣಿಕ ಸಾಲಿಗೆ ಒಟ್ಟು ರೂ 122.75 ಲಕ್ಷಗಳನ್ನು ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಪರಿಶಿಷ್ಟ ಜಾತಿ ವಿದ್ಯಾರ್ಥಿನಿಯರ ಸರ್ಕಾರೇತರ ಶುಲ್ಕ ಮರುಪಾವತಿಗಾಗಿ ಲೆಕ್ಕಶೀರ್ಷಿಕೆ "2202-02-107-3-02-422" ಎಸ್‌ಸಿಪಿ ಯೋಜನೆ ಯಡಿಯಲ್ಲಿ ಎರಡನೆ ಮತ್ತು ಮೂರನೇಯ ಕಂತಿನಲ್ಲಿ ರೂ 122.75 ಲಕ್ಷಗಳನ್ನು ಬಿಡುಗಡೆ ಮಾಡಿರುತ್ತದೆ. 2014-15 ನೇ ವರ್ಷದಲ್ಲಿ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಒಟ್ಟು 42197ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದಾರೆ. ಅವುಗಳ ಪೈಕಿ 26918 ವಿದ್ಯಾರ್ಥಿನಿಯರಿಗೆ ಪ್ರತಿ ವಿದ್ಯಾರ್ಥಿನಿಗೆ ರೂ. 456/-ರಂತೆ ವಿತರಿಸಬೇಕಾಗಿರುತ್ತದೆ.

2014-15 ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಒಟ್ಟು 42197 ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದಾರೆ. ಅವುಗಳ ಪೈಕಿ 26918 ವಿದ್ಯಾರ್ಥಿನಿಯರಿಗೆ ಪ್ರತಿ ವಿದ್ಯಾರ್ಥಿನಿಗೆ ರೂ. 456/-ರಂತೆ ಒಟ್ಟು ರೂ 122,74,608/-( **ಒಂದು ಕೋಟಿ ಇಪ್ಪತ್ತೆರಡು ಲಕ್ಷದ ಎಪ್ಪತ್ತಾ ನಾಲ್ಕು ಸಾವಿರದ ಆರು ನೂರ ಎಂಟು ರೂಪಾಯಿಗಳು ಮಾತ್ರ**)ಗಳನ್ನು ಲೆಕ್ಕಶೀರ್ಷಿಕೆ **"2202-02-107-3-02-422" ಎಸ್‌ಸಿಪಿ** ಯೋಜನೆ ಅಡಿಯಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ಪರಿಶಿಷ್ಟ ಜಾತಿಯ ವಿದ್ಯಾರ್ಥಿನಿಯರಿಗೆ ಸರ್ಕಾರೇತರ ಶುಲ್ಕವನ್ನು ಸರ್ಕಾರಿ ಪದವಿ ಪುರ್ವ ಕಾಲೇಜಿನ ಪ್ರಾಂಶುಪಾಲರಿಗೆ ಮರು ಭರಿಸಲು ಸರ್ಕಾರವು ಉಲ್ಲೇಖ 02 ಮತ್ತು 03 ರಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಇದರೊಂದಿಗೆ ಲಗತ್ತಿಸಿರುವ ಅನುಬಂಧ 01 ರಂತೆ ರಾಜ್ಯದ ಜಿಲ್ಲೆಗಳ ಉಪನಿರ್ದೇಶಕರಿಗೆ ಬಿಡುಗಡೆ ಮಾಡಲಾಗಿದೆ. ಅನುಬಂಧ 1 ರಲ್ಲಿ ತೋರಿಸಿರುವಂತೆ ಬಿಡುಗಡೆ ಮಾಡಿರುವಂತೆ ಜಿಲ್ಲಾ ಉಪ ನಿರ್ದೇಶಕರುಗಳು ಅನುದಾನವನ್ನು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿನಿಯರ, ವಿವರಗಳನ್ನು ಪ್ರಾಂಶುಪಾಲರುಗಳಿಂದ ಪಡೆದು ದಿನಾಂಕ **25.02.2015** ರೊಳಗೆ ಅನುದಾನ ಬಿಡುಗಡೆ ಮಾಡಲು ಸೂಚಿಸಲಾಗಿದೆ.

ಮೇಲ್ಕಂಡಂತೆ ಬಿಡುಗಡೆ ಮಾಡಲಾದ ಅನುದಾನದಲ್ಲಿ ಆಯಾ ಜಿಲ್ಲಾ ಉಪನಿರ್ದೇಶಕರುಗಳು ಸಂಬಂಧಪಟ್ಟ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಅಗತ್ಯವಾದ ಅನುದಾನವನ್ನು ಬಿಡುಗಡೆ ಮಾಡುವುದು. ಅಯಾ ಪ್ರಾಂಶುಪಾಲರಗಳು ಕಡ್ಡಾಯವಾಗಿ ಈ ಮೊತ್ತವನ್ನು ಡಿ.ಸಿ.ಬಿಲ್ಲಿನ ಕೆ.ಎಫ್.ಸಿ. ನಮೂನೆ-5 ರಲ್ಲಿ ಚಲನ್ ಮುಖಾಂತರ ಡ್ರಾ ಮಾಡಿಕೊಳ್ಳುವುದು. ಉಪನಿರ್ದೇಶಕರು ಈ ಪ್ರಕ್ರಿಯೆಯನ್ನು ನಡೆಸುವಾಗ ಕೆಳಕಂಡ ಷರತ್ತುಗಳನ್ನು ಪಾಲಿಸತಕ್ಕದ್ದು:

1. ಎಸ್‌ಸಿಪಿ ಯೋಜನೆಯಡಿಯಲ್ಲಿ ವಿದ್ಯಾರ್ಥಿನಿಯರ ಸರ್ಕಾರೇತರ ಯಾವುದೇ ಶುಲ್ಕಗಳನ್ನು ವಸೂಲಿ ಮಾಡಿಲ್ಲವೆಂದು ಪ್ರಾಂಶುಪಾಲರ ದೃಢೀಕರಣ ಪತ್ರ ಪಡೆದು ಬಿಲ್ಲನ್ನು ಮೇಲು ಸಹಿ ಮಾಡುವುದು.
2. ಈ ಬಗ್ಗೆ ವೆಚ್ಚವನ್ನು ನಿಯಮಾನುಸಾರ ಭರಿಸಿ ಲೆಕ್ಕ ಪತ್ರವನ್ನು ನಿರ್ವಹಿಸಲಾಗುವುದು ಎಂಬ ದೃಢೀಕರಣವನ್ನು ಪ್ರಾಂಶುಪಾಲರಿಂದ ಪಡೆಯತಕ್ಕದ್ದು.
3. ***ಈ ಕೆಳಗೆ ನಮೂದಿಸಿರುವ ಅನುದಾನವನ್ನು ಕಾಲೇಜಿನ ಪ್ರಾಂಶುಪಾಲರುಗಳು ನೇರವಾಗಿ ಸಂಬಂಧಿಸಿದವರಿಗೆ ಪಾವತಿಸಲು ಸೂಚಿಸುವುದು.***

| ಕ್ರಮ ಸಂಖ್ಯೆ | ಶುಲ್ಕಗಳ ವಿವರ | ಪ್ರಥಮ ಪಿಯುಸಿ | ದ್ವಿತೀಯ ಪಿಯುಸಿ |
|---|---|---|---|
| 1 | ಶಿಕ್ಷಕರ ಕಲ್ಯಾಣ ನಿಧಿ (TBF) | 25-00 | 25-00 |
| 2 | ವಿದ್ಯಾರ್ಥಿ ಕಲ್ಯಾಣ ನಿಧಿ(SWF) | 10-00 | 10-00 |
| 3 | ವಿಶೇಷ ಕ್ರೀಡಾ ಶುಲ್ಕ (SSF) | 34-00 | 34-00 |
| | ಒಟ್ಟು | 69-00 | 69-00 |

**ಯಾವುದೇ ಕಾರಣಕ್ಕೂ ಈ ಯೋಜನೆಯಡಿ ಬಿಡುಗಡೆಯಾದ ಹಣವನ್ನು ಲ್ಯಾಪ್ಸ್ ಆಗದಂತೆ ಮೇಲ್ಕಂಡ ದಿನಾಂಕದೊಳಗೆ ಡ್ರಾ ಮಾಡಲು ಸೂಕ್ತ ಕ್ರಮ ಕೈಗೊಳ್ಳುವುದು. ಮೇಲ್ಕಂಡಂತೆ ಡ್ರಾ ಮಾಡಲಾದ ಅನುದಾನ ವಿವರವನ್ನು ಬಳಸಿದ ಬಗ್ಗೆ ಬಳಕೆ ಪ್ರಮಾಣ ಪತ್ರವನ್ನು ತಪ್ಪದೇ** ದಿನಾಂಕ **05.03.2015** ರೊಳಗಾಗಿ ಜಂಟಿ ನಿರ್ದೇಶಕರು (ಶೈಕ್ಷಣಿಕ), ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012 ಇವರಿಗೆ ಕಳುಹಿಸಲು ಸೂಚಿಸಿದೆ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಯವರು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಸಂಬಂಧಿಸಿದ ಖಜಾನಾಧಿಕಾರಿಗಳು.
5. ಲೆಕ್ಕಪತ್ರಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
6. ಸಂಬಂಧಿಸಿದ ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ ಸೂಕ್ತ ಕ್ರಮಕ್ಕಾಗಿ.
7. ಇ-ಆಡಳಿತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ವೆಬ್‌ಸೈಟ್‌ನಲ್ಲಿ ಅಳವಡಿಸಲು ಮುಂದಿನ ಕ್ರಮಕ್ಕಾಗಿ.
8. ಕಛೇರಿ ಪ್ರತಿ.

ಹೆಣ್ಣು ಮಕ್ಕಳ ಶುಲ್ಕ ವಿನಾಯ್ತಿ ಯೋಜನೆಯಡಿ 2014-15ನೇ ಶೈಕ್ಷಣಿಕ ವರ್ಷಕ್ಕೆ ವಿದ್ಯಾರ್ಥಿನಿಯರಿಗೆ ಸರ್ಕಾರೇತರ ಶುಲ್ಕ ವಿನಾಯಿತಿಯ ಮೊತ್ತವನ್ನು ಕಾಲೇಜಿಗೆ ಪಾವತಿಸುವ ಬಗ್ಗೆ ಜಿಲ್ಲಾ ಉಪನಿರ್ದೇಶಕರುಗಳಿಗೆ ಲೆಕ್ಕಶೀರ್ಷಿಕೆ 2202-02-107-3-02-422ರಲ್ಲಿ ಒಂದೇ ಕಂತಿನಲ್ಲಿ ಬಿಡುಗಡೆ ಮಾಡಲಾದ ಮೊತ್ತವನ್ನು ತೋರಿಸುವ ಪಟ್ಟಿ. ಪಮೂಶಿ ನಿರ್ದೇಶನಾಲಯದ ಜ್ಞಾಪನ ಸಂಖ್ಯೆ:ಪ.ಪೂ.ಶಿ.ಇ/ಶೈ.ಶಾ.04/ಹೆ.ಮ.ಶು.ವಿ./ SCP-01/2014-15, ದಿನಾಂಕ 12.02.2015ಕ್ಕೆ ಅನುಬಂಧ-01

| Sl No | District Name | I PUC | II PUC | Total no of students | students strength to release the amount | Amount per Student | Total Amount released Dist DDPUE |
|---|---|---|---|---|---|---|---|
| 1 | ಬೆಂಗಳೂರು-ಉತ್ತರ | 695 | 679 | 1374 | 872 | 456 | 397632 |
| 2 | ಬೆಂಗಳೂರು-ದಕ್ಷಿಣ | 762 | 549 | 1311 | 832 | 456 | 379392 |
| 3 | ಬೆಂಗಳೂರು-ಗ್ರಾಮಾಂತರ | 743 | 593 | 1336 | 848 | 456 | 386688 |
| 4 | ರಾಮನಗರ | 642 | 517 | 1159 | 736 | 456 | 335616 |
| 5 | ಬಳ್ಳಾರಿ | 686 | 495 | 1181 | 750 | 456 | 342000 |
| 6 | ಬೆಳಗಾವಿ | 555 | 354 | 909 | 577 | 456 | 263112 |
| 7 | ಬಾಗಲಕೋಟ | 457 | 296 | 753 | 478 | 456 | 217968 |
| 8 | ವಿಜಾಪುರ | 463 | 364 | 827 | 525 | 456 | 239400 |
| 9 | ಬೀದರ | 620 | 495 | 1115 | 708 | 456 | 322848 |
| 10 | ದಾವಣಗೆರೆ | 759 | 691 | 1450 | 921 | 456 | 419976 |
| 11 | ಚಿತ್ರದುರ್ಗ | 905 | 739 | 1644 | 1060 | 456 | 483360 |
| 12 | ಚಿಕ್ಕಮಂಗಳೂರು | 980 | 756 | 1736 | 1110 | 456 | 506160 |
| 13 | ಗದಗ | 186 | 159 | 345 | 219 | 456 | 99864 |
| 14 | ಹಾವೇರಿ | 265 | 182 | 447 | 284 | 456 | 129504 |
| 15 | ಧಾರವಾಡ | 113 | 86 | 199 | 126 | 456 | 57456 |
| 16 | ಗುಲ್ಬರ್ಗಾ | 1080 | 811 | 1891 | 1210 | 456 | 551760 |
| 17 | ಯಾದಗಿರಿ | 445 | 339 | 784 | 498 | 456 | 227088 |
| 18 | ಹಾಸನ | 1605 | 1253 | 2858 | 1825 | 456 | 832200 |
| 19 | ಚಿಕ್ಕಬಳ್ಳಾಪುರ | 948 | 769 | 1717 | 1100 | 456 | 501600 |
| 20 | ಕೋಲಾರ | 1551 | 1273 | 2824 | 1805 | 456 | 823080 |
| 21 | ಚಾಮರಾಜನಗರ | 974 | 583 | 1557 | 989 | 456 | 450984 |
| 22 | ಮೈಸೂರು | 2310 | 1862 | 4172 | 2649 | 456 | 1207944 |
| 23 | ಮಂಡ್ಯ | 926 | 806 | 1732 | 1155 | 456 | 526680 |
| 24 | ಉತ್ತರ ಕನ್ನಡ | 347 | 298 | 645 | 410 | 456 | 186960 |
| 25 | ಕೊಪ್ಪಳ | 405 | 280 | 685 | 435 | 456 | 198360 |
| 26 | ರಾಯಚೂರು | 480 | 389 | 869 | 552 | 456 | 251712 |
| 27 | ದಕ್ಷಿಣ ಕನ್ನಡ | 536 | 410 | 946 | 601 | 456 | 274056 |
| 28 | ಉಡುಪಿ | 281 | 261 | 542 | 344 | 456 | 156864 |
| 29 | ಶಿವಮೊಗ್ಗ | 1164 | 862 | 2026 | 1290 | 456 | 588240 |
| 30 | ತುಮಕೂರು | 1579 | 1150 | 2729 | 1733 | 456 | 790248 |
| 31 | ಕೊಡಗು | 226 | 208 | 434 | 276 | 456 | 125856 |
| | | 23688 | 18509 | 42197 | 26918 | | 12274608 |

(ಒಂದು ಕೋಟಿ ಇಪ್ಪತ್ತೆರಡು ಲಕ್ಷದ ಎಪ್ಪತ್ತನಾಲ್ಕು ಸಾವಿರದ ಆರು ನೂರ ಎಂಟು ರೂ.ಗಳು ಮಾತ್ರ)

ನಿರ್ದೇಶಕರು,

ಪದವಿ ಪೂರ್ವ ಶಿಕ್ಷಣ ಇಲಾಖೆ

ಕರ್ನಾಟಕ ಸರ್ಕಾರ

ಸಂಖ್ಯೆ: ಪಪೂಶಿ/ಸಿಬ್ಬಂದಿ-1/ಎ(5)/ಎನ್‌ಓಸಿ/02/2014-15

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಸಂಪಿಗೆ ರಸ್ತೆ, 18ನೇ ಅಡ್ಡ ರಸ್ತೆ,ಮಲ್ಲೇಶ್ವರಂ,
ಬೆಂಗಳೂರು-12 ದಿನಾಂಕ: 19-02-2015.

**ಸುತ್ತೋಲೆ**

**ವಿಷಯ:-** ಇಲಾಖಾ ಅನುಮತಿ ಇಲ್ಲದೆ ವಿದೇಶ ಪ್ರವಾಸ ಕೈಗೊಳ್ಳದಿರುವ ಕುರಿತು.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಇಲಾಖೆಯ ಅನುಮತಿ ಇಲ್ಲದೆ ವಿದೇಶ ಪ್ರವಾಸ ಮಾಡಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಈ ಹಿನ್ನಲೆಯಲ್ಲಿ ಇನ್ನು ಮುಂದೆ ಇಲಾಖಾ ಅನುಮತಿ ಇಲ್ಲದೆ ವಿದೇಶ ಪ್ರವಾಸ ಮಾಡಿದ್ದಲ್ಲಿ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ, ಅಪೀಲು) 1957 ನಿಯಮಾವಳಿಗಳಡಿ ನಿಯಮಾನುಸಾರ ಕ್ರಮಕೈಗೊಳ್ಳಗುವುದೆಂದು ಈ ಮೂಲಕ ಸೂಚಿಸಿದೆ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

1) ರಾಜ್ಯದ ಎಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರುಗಳಿಗೆ.
2) ರಾಜ್ಯದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರುಗಳಿಗೆ ಮತ್ತು ಉಪನ್ಯಾಸಕರುಗಳಿಗೆ.
3) ರಾಜ್ಯದ ಎಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆಯ ಅಧಿಕ ನೌಕರರಿಗೆ.